# ಗೀತಾ ನಾಗಭೂಷಣ ಅವರ ಸಣ್ಣ ಕಥೆಗಳಲ್ಲಿ ತಾಯ್ತನ

**ಪ್ರವೀಣ ಗುರುಶಾಂತ**

ಸಂಶೋಧನಾರ್ಥಿ, ಕಲಬುರಗಿ.

**Received: 15/10/2024 ; Acepted: 01/11/2024 ; Published: 30/11/2024**

**DOI: https://doi.org/10.5281/zenodo.14246413**

## ABSTRACT:

ಗೀತಾ ನಾಗಭೂಷಣ ಅವರು ಮುಖ್ಯವಾಗಿ ಸ್ತ್ರೀ ನೆಲೆಯಲ್ಲಿ ಕಥೆಗಳನ್ನು ಕಟ್ಟಿಕೊಟ್ಟಿದ್ದಾರೆ. ಅಸಾಹಯಕತೆ, ಶೋಷಣೆ, ತುಡಿತ, ಅವಮಾನ, ಸಮಸ್ಯೆಗಳನ್ನು ಎದುರಿಸುವ ಧೈರ್ಯ, ಸಾಧಿಸುವ ಛಲ, ಸಂಕಟ, ತಾಯ್ತನದ ಪ್ರೀತಿ ಹೀಗೆ ಅನೇಕ ಬಗೆಯ ಕಥೆಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ್ದಾರೆ. ಅವರ ಮಹಿಳಾ ಪರ ಚಿಂತನೆಗಳು ಅವರ ಕಥೆಗಲ್ಲಿ ವ್ಯಕ್ತವಾಗುತ್ತದೆ.

## KEYWORDS:

ಗೀತಾ ನಾಗಭೂಷಣ, ಸಣ್ಣ ಕಥೆ, ಮಹಿಳಾ ಸಾಹಿತ್ಯ, ತಾಯ್ತನ, ಹೆಣ್ಣು.

ಕನ್ನಡ ಸಾಹಿತ್ಯ ಪರಂಪರೆಯನ್ನು ಅವಲೋಕಿಸಿದಾಗ ಹೊಸ ಗನ್ನಡ ಸಾಹಿತ್ಯದ ಸಂದರ್ಭದಲ್ಲಿ ಕಾವ್ಯ, ಕಾದಂಬರಿ, ನಾಟಕ, ವಿಮರ್ಶೆ, ಆತ್ಮಕಥನ. ಪ್ರವಾಸ ಕಥನ ಮುಂತಾದ ಪ್ರಕಾರಗಳು ಬೆಳೆದು ಬಂದಿರುವುದು ಕಾಣುತ್ತೆವೆ. ಕಾದಂಬರಿಯ ತರುವಾಯ ಸಣ್ಣ ಕಥೆ ಅತ್ಯಂತ ಜನಪ್ರಿಯ ಸಾಹಿತ್ಯವಾಗಿ ಬೆಳೆದು ಬಂತು. ಸುಮಾರು ನೂರು ವರ್ಷಗಳ ಹಿಂದೆ ಜನ್ಮ ತಾಳಿದ ಸಣ್ಣ ಕಥಾ ಸಾಹಿತ್ಯವು ಇಂದು ಬೃಹದ್ಡಾಕಾರವಾಗಿ ಬೆಳೆದು ನಿಂತಿದೆ.

1900ರಲ್ಲಿ 'ಸುವಾಸಿನಿ' ಮಾಸ ಪತ್ರಿಕೆಯಲ್ಲಿ ಪಂಜೆ ಮಂಗೇಶರಾಯರ 'ನನ್ನ ಚಿಕ್ಕ ತಾಯಿ', 'ನನ್ನ ಚಿಕ್ಕ ತಂದೆ' ಎಂಬ ಎರಡು ಕಥೆಗಳು ಪ್ರಕಟವಾದವು. ಪಂಜೆಯವರು, ಎಂ. ಎನ್. ಕಾಮತರು, ಕೆರೂರು ವಾಸುದೇವಾಚಾರ್ಯರು, ಪ್ರಾರಂಭದಲ್ಲಿ ಕಥೆಗಳನ್ನು ಬರೆದವರು. ಆದರೆ ಸಣ್ಣ ಕಥೆಗೆ ಒಂದು ಸ್ವರೂಪವನ್ನು ತಂದು ಕೊಟ್ಟು ಅದಕ್ಕೆ ಗಂಭೀರವಾದ ಜೀವನ ಚಿಂತನ ಮಾಧ್ಯಮವನ್ನಾಗಿ ಮಾಡಿ, ಭಾಷೆಯನ್ನು ಅದಕ್ಕೆ ಹದಗೊಳಿಸಿದವರು ಶ್ರೀನಿವಾಸರು (ಮಾಸ್ತಿ ವೆಂಕಟೇಶ ಅಯ್ಯಂಗಾರ). ಅವರ ಮೊದಲ ಕಥಾ ಸಂಗ್ರಹ 'ಕೆಲವು ಸಣ್ಣ ಕಥೆಗಳು' 1911 ರಿಂದ 1920ರವರೆಗೆ ಬರೆದ ಕಥೆಗಳು ಇಲ್ಲಿ ಪ್ರಕಟವಾದವು. ಹೀಗೆ ನೂರು ವರ್ಷಗಳ ಇತಿಹಾಸ ಹೊಂದಿ ಇಂದು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಣ್ಣ ಕಥೆಗಳ ಸಂಖ್ಯೆ ಲೇಕ್ಕಿಸುವುದು ಕಷ್ಟವೆಂದೇ ಹೇಳಬಹುದು. ಕನ್ನಡದ ಅನೇಕ ಪ್ರಸಿದ್ಧ ಕಥೆಗಾರರು

ಆಧುನಿಕ ಕನ್ನಡ ಸಣ್ಣ ಕಥೆಗಳಲ್ಲಿ ಕಥೆಗಾರರಾಗಿ ಗುರುತಿಸಿಕೊಂಡಿದ್ದಾರೆ ಮತ್ತು ಕಥಾ ಸಾಹಿತ್ಯಕ್ಕೆ ಮಹತ್ವದ ಕೊಡುಗೆ ನೀಡಿದ ಶ್ರೇಯಸ್ಸು ಅವರದ್ದು. ಅವರಲ್ಲಿ ಗೀತಾ ನಾಗಭೂಷಣ ಅವರು ಕೂಡ ಮಹತ್ವದ ಕಥೆಗಾರರೆಂದೆ ಹೇಳಬಹುದು. ಇವರು ರಚಿಸಿರುವ ಸಣ್ಣ ಕಥೆಗಳು ಕನ್ನಡ ಸಾಹಿತ್ಯದಲ್ಲಿ ಒಂದು ಹೊಸ ಮೈಲಿಗಲ್ಲೆ ಸೃಷ್ಟಿಸಿರುವುದು ಸುಳ್ಳಲ್ಲ.

ಗೀತಾ ನಾಗಭೂಷಣ ಅವರ ಕಥೆಗಳಲ್ಲಿ ಅಡಗಿರುವ ಹೆಣ್ಣಿನ ಆಂತರ್ಯ ತೋಳಲಾಟವನ್ನು ಹೇಳುವ ಅನೇಕ ಕಥೆಗಳು ಕನ್ನಡ ಸಾಹಿತ್ಯದಲ್ಲಿ ಮಹತ್ವದ ಸ್ಥಾನ ಪಡೆದುಕೊಂಡಿವೆ. ಅವರ ಈ ಕಥೆಗಳು ಗ್ರಾಮೀಣ ಜನರ ಬದುಕಿನ ಅನಾವರಣವು ಹೌದು. ಇಂತಹ ಅನೇಕ ಕಥೆಗಳು ಇರುವುದರಿಂದ ಅವರ ಎರಡು ಕಥೆಗಳು ಆಯ್ದುಕೊಂಡು ಆ ಕಥೆಗಳಲ್ಲಿ ಅಡಗಿದ ಹೆಣ್ಣಿನ ತಾಯ್ತನದ ತುಡಿತ, ಸಂಕಟ, ಮಕ್ಕಳಿಗಾಗಿ ಅವಳ ಪರದಾಟ ಇಂತಹ ಸಂಕಟವು ಹೊತ್ತ ಕತೆಗಳು ಅವ್ವ ಮತ್ತು ಗರ್ಭ ಎಂಬ ಎರಡು ಕಥೆಗಳಲ್ಲಿ ಆಯ್ದುಕೊಂಡು ಈ ಕಥೆಗಳಲ್ಲಿನ ತಾಯ್ತನದ ಮಹತ್ವವನ್ನು ಕಂಡು ಕೊಳ್ಳಲಾಗಿದೆ.

ಈ ಎರಡು ಕಥೆಯಲ್ಲಿ ಹೆಣ್ಣಿನ ತಾಯ್ತನ ಹೇಗೆ ಭಿನ್ನವಾಗಿ ಮೂಡಿ ಬಂದಿದೆ ಎಂಬುದು ಅರಿಯಲಾಗಿದೆ. ಒಂದರಲ್ಲಿ ಜನ್ಮ ನೀಡಿದ ಮಗುವನ್ನು ರೋಗದಿಂದ ಅಂದರೆ ಸಾವಿನಂಚಿನಿಂದ ಉಳಿಸಿಕೊಳ್ಳವ ಸಲುವಾಗಿ ತನ್ನ ಮೈಯನ್ನು ಮಾರಿಕೊಂಡರೆ; ಇನ್ನೊಂದರಲ್ಲಿ ಹುಟ್ಟು ಒಂಟಿಯಾಗಿರುವ ಊರಿನ ಶ್ರೀಮಂತ ಗೌಡ್ತಿ ಎಂಬ ಹೆಣ್ಣು ಮಕ್ಕಳು ಪಡೆಯುವ ಹಂಬಲಕ್ಕಾಗಿ ಗರ್ಭವನ್ನು ಬಾಡಿಗೆ ಪಡೆದು ತಾನೆ ಮಗುವಿಗೆ ಜನ್ಮ ನೀಡಿದೆ ಎಂಬ ಕಡ್ಡಿ ಕಟ್ಟುವ ಸಾಹಾಸ. ಈ ವಿಭಿನ್ನ ಸಂದರ್ಭಗಳು ಕಂಡರು ಆ ಉಭಯ ಮನಸ್ಸುಗಳ ತಾಯ್ತನದ ಹಂಬಲ ಒಂದೇಯಾಗಿರವುದು.

ಅವ್ವ ಎಂಬ ಕಥೆಯಲ್ಲಿ ಗಂಗಾ ಎಂಬ ಕಥಾ ನಾಯಕಿಯ ತಾಯ್ತನದ ಸಂಕಟವನ್ನು ಇಲ್ಲಿ ಓದುಗರ ಮುಂದಿಟ್ಟಿದ್ದಾರೆ. ಗಂಗ ಸೀದಾ ಸಾದಾ ಹಳ್ಳಿಯ ಹೆಣ್ಣು ಮಗಳು ತನ್ನ ರೋಗಿಷ್ಟೆ ಮಗುವನ್ನು ಕೊಂಕುಳದಲ್ಲಿ ಹಾಕಿಕೊಂಡು ಕಲಬುರ್ಗಿಯ ಸರಕಾರಿ ಆಸ್ಪತ್ರೆಗೆ ತಂದು ದಾಖಲಿಸಿ ಚಿಕಿತ್ಸೆಗಾಗಿ ಕಾದವಳಿಗೆ ಎದುರಾದ ಸಮಸ್ಯೆ ಸಣ್ಣದಲ್ಲ. ಸರಕಾರಿ ದವಾಖಾನಿಯಲ್ಲಿ ಎಲ್ಲವು ಪುಕ್ಕಟೆ ಆಗುತ್ತೆ ಎಂಬ ಭಾವನೆಯಿಂದ ಬಂದವಳಿಗೆ ಹೊರಗಿನ ಔಷಧಿ ತರಲು ಬರೆದು ಕೊಟ್ಟಾಗ ಜಗವೇ ಮುಳುಗಿದಂತ ಭಾವ ಆಕೆಯಲ್ಲಿ ಮೂಡಿ ಬಂದಿತ್ತು. ಹಣವೇ ಇಲ್ಲದ ಗಂಗ ಔಷಧ ಎಲ್ಲಿಂದ ತರುವುದು. ಮಗುವನ್ನು ಹೇಗೆ ಉಳಿಸಿಕೊಳ್ಳುವುದು?

ನಗರದ ಪರಿಕಲ್ಪನೆಯೆ ಇಲ್ಲದ ಗಂಗಾ ಬಸ್ ಚಾರ್ಜಗೆ ಮಾತ್ರ ದುಡ್ಡು

ಹೊಂದಿಸಿಕೊಂಡು ಬಂದಾಕೆಗೆ ಇಲ್ಲಿನ ಕ್ರೂರ ಜಗತ್ತಿನ ದರ್ಶನವಾದದ್ದು ಕಂಡು ಕುಸಿದು ಬೀಳುತ್ತಾಳೆ. ಪುಕ್ಕಟೆ ಇಂಜಕ್ಷನ್, ಔಷಧಿ ಇವೆಲ್ಲ ಅವಳಿಗೆ ಗೌಣವಾಗಿ ಕಂಡವು. ಸರಕಾರಿ ವೈದ್ಯರು ಮಗುವನ್ನು ಪರಿಕ್ಷಿಸಿ ಹೊರಗಿನ ಔಷಧಿ ತಂದು ಕೊಡಿ ಎಂದು ಹೇಳಿದಾಗ ಗಂಗ ಮೂಕಳಾಗಿ ನಿಂತಳು. ಔಷಧದ ಅಂಗಡಿಗೆ ಹೋಗಿ ರೊಕ್ಕ ಇಲ್ಲ, ಆಮೇಲೆ ತಂದು ಕೊಡ್ತಿನಿ ಔಷಧ ಕೊಡ್ರಿ ಎಂದು ಕೇಳಿದರು. ಅವರು ಔಷಧ ಕೊಡಲಿಲ್ಲ. ಹೇಗಾದರು ಮಾಡಿ ಮಗುವನ್ನು ಬದುಕಿಸಿಕೊಳ್ಳಬೇಕು ಎಂದು ನಿರ್ಧಾರ ಮಾಡ್ಡಿದಳು. ಹಾಗೆ ಮಗುವಿನ ಸಂಕಟ ಕಂಡು ಕಣ್ಣೀರು ಸುರಿಸುತ್ತಾ ಓಡಾಡುತ್ತಿದ್ದಳು.

“ಬರೇ ಅತ್ತರ ಏನೂ ಆಗಂಗಿಲ್ಲ ತಂಗೀ... ಹೋಗು ಏನರೇ ಮಾಡಿ ಔಷಧ ತಗೊಂಡು ಬಾ... ನಿನ್ ಮಗ ಬದಕ ಬೇಕಾದ್ರ ಔಷಧ ಇಂಜಿಶನ್ ಬೇಕು”[1] ಎಂಬ ಮಾತನ್ನು ಎದುರಿಗಿದ್ದ ಮಂಚದ ಮೇಲೆಯೊಬ್ಬಳು ಹೇಳಿದಾಗ ಹೆಂಗರ ಮಾಡಿ ಔಷಧ ತರಬೇಕು ಎಂಬ ಹಂಬಲದಿಂದ “ಮುತ್ಯಾ ನನ್ ಕೂಸಿಗಿ ಜರಾ ನೋಡ್ರೀ... ನಾ ಹೊರಗೆ ಹೋಗಿರ್ತೀನಿ”[2] ಎಂದು ಪಕ್ಕದ ಮಂಚದಲ್ಲಿರುವ ವೃದ್ಧನಿಗೆ ಹೇಳಿ ಹೊರ ಬಂದು ಮಗುವಿನ ಜೀವ ಉಳಿಸಿಕೊಳ್ಳಲು ಗಂಗ ಹಣದ ವ್ಯವಸ್ಥೆ ಮಾಡಬೇಕೆಂದು ತಿರ್ಮಾನಿಸಿದಳು. ಏನಾದ್ರ ಚಿಂತೆ ಇಲ್ಲ, ನನ್ನ ಕರುಳ ಕುಡಿಗಾಗಿ ನನ್ನ ಮೈಯಾದರು ಮಾರಿ ಕೂಸಿನ ಜೀವ ಉಳಿಸಿಕೊಳ್ಳಬೇಕು ಎಂದು ನಿರ್ಧರಿಸಿದಳು. ಆಕೆಯ ನಿರ್ಧಾರದಲ್ಲಿ ತಾಯ್ತನದ ಆದಮ್ಯ ಪ್ರೇಮ ಪ್ರೀತಿ ಎಂತವರನ್ನು ಮೂಕ ವಿಸ್ಮಿತರನ್ನಾಗಿ ಮಾಡುತ್ತದೆ.

ಆಸ್ಪತ್ರೆಯ ಹೊರ ಬಂದವಳೆ ಕತ್ತಲೆ ಆವರಿಸಿದ ವೇಳೆಯಲ್ಲಿ ಕಣ್ಣರು ಹಾಕುತ್ತಾ ಅತ್ತ ಇತ್ತ ನೋಡುತ್ತಾ ಕುಳಿತಳು. ಅಷ್ಟರಲ್ಲಿ ಅಲ್ಲಿಗೆ ಒಬ್ಬ ಸೋಮರಿ ಬಂದು ಯಾರಲ್ಲಿ ಎಂಬ ಧ್ವನಿಗೆ: “ನಾನ್ರೀಯಪ್ಪಾ... ಯಪ್ಪ ಗಂಗಾ... ಹಳ್ಳಿಯಿಂದ ಬಂದಿನ್ರಿ ಬಾಬಾ... ನನ್ ಕೂಸಿಗೆ ದವಖಾನಿಗೆ ಸರ್ಕಿ ಮಾಡಿದ್ರೀ... ಇಂಜಶನ್ ಆಗಸುದ್ನಾ ಬರಕೊಡಿದ್ರೆ ಡಾಕಟರ ಸಾಬ್ರ...”[3]

ಗಂಗನಾ ಮಾತು ಕೇಳಿದ ಆ ಗಂಡು ಆಸಾಮಿ ಆಕೆಯ ಅಸಹಾಯಕತೆಯನ್ನ ತಿಳಿದ ಮರುಕ್ಷಣವೆ ಹಣ ಕೊಡುವುದಾಗಿ ಹೇಳಿ ತನ್ನ ಕಾರು ಹತ್ತಿಸಿಕೊಂಡು ಹೋಗಿ ಸಂಪೂರ್ಣವಾಗಿ ಆಕೆಯನ್ನು ಅನುಭವಿಸಿ ಮತ್ತೆ ಅದೇ ಜಾಗದಲ್ಲಿ ತಂದು ಬಿಡುವನು. ಕೇವಲ ಐವತ್ತು ರೂಪಾಯಿಗಾಗಿ ಅಲ್ಲಿ ತನ್ನ ಕರಳು ಕುಡಿಯ ಜೀವ ಉಳಿಸುವ ಹಂಬಲದಿಂದ ತನ್ನ ಮೈ ಮಾನವೇ ಲೇಕ್ಕಿಸಿದ ಆ ತಾಯಿಯ ತಾಯ್ತನ ಪ್ರೀತಿಯ ಮುಂದೆ ಮಾನ ಗೌಣವಾಗುತ್ತದೆ. ಕಾರಣ ತಾಯ್ತನದ ಮುಂದೆ ಇವು ಯಾವುದು ನಿಲ್ಲುವುದಿಲ್ಲ ಎಂಬ ಸತ್ಯ ಇಲ್ಲಿ ಮುಂದೆ ನಿಲ್ಲುವಂತಹದು. ಇದು ಅವ್ವ

ಕಥೆಯಲ್ಲಿನ ಹೆಣ್ಣಿನ ಅಸಹಾಯಕತೆಯಲ್ಲಿ ಅಡಗಿದ ತಾಯ್ತನದ ಒಂದು ಕಥೆಯಾದರೆ; ಗರ್ಭ ಎಂಬ ಕಥೆಯಲ್ಲಿ ಬಂಜೆಯೊಬ್ಬಳ ಸಂಕಟದಲ್ಲಿ ಅಡಗಿದ ತಾಯ್ತನ ನೋಡಬಹುದು.

ಪ್ರತಿಯೊಂದು ಹೆಣ್ಣಿಗೆ ತಾಯ್ತನ ಅನುಭವಿಸುವ ಅಗಾದವಾದ ಆಸೆಯು ಹಂಬಲವು ಪ್ರಕೃತಿ ಸಹವಾಸಗಿ ಬಂದಿರುವ ಉಡುಗೊರೆಯು ಹೌದು. ಅವ್ವ ಕತೆಯಲ್ಲಿ ಮಗುವಿಗಾಗಿ ತನ್ನ ಮೈ ಮಾರಿದರೆ, ಗರ್ಭ ಎಂಬ ಕತೆಯಲ್ಲಿ ಬಂಜೆಯಾಗಿದ್ದ ಗೌರಿ ತನ್ನ ಗೆಳತಿಯ ಗರ್ಭವನ್ನು ಬಂಡಿಗೆ ಪಡೆದುಕೊಂಡು ತಾಯ್ತನ ಅನುಭವಿಸುವ ಪರಿಯು ಕಂಡು ಬರುತ್ತವೆ. ಹೇಗಾದರು ಮಾಡಿ ಜನರ ಬಾಯಿ ಮುಚ್ಚಿಸಬೇಕು. ನಾನು ಬಂಜೆ ಅಲ್ಲ ಎಂದು ತಿಳಿಹೇಳಬೇಕು ಎಂಬ ಸಂಕಟದಲ್ಲಿ ಗೌರಿ ತನ್ನ ತವರಿನಿಂದ ಮನೆಯೊಳಗಿ ಬಂದ ಚಿಕ್ಕಿಯ ಮನ ಒಲಿಸಿ ಗರ್ಭದಾನ ಮಾಡಲು ಒಪ್ಪಿಸುತ್ತಾಳೆ. ಬಡತನದಲ್ಲಿ ಬೆಳೆದು ದಿಕ್ಕು ದಿಸೆಯಿಲ್ಲದ ಚಿಕ್ಕಿ ಇದ್ದೊಬ ಅಜ್ಜನ ಮರಣ ನಂತರ ಗೌರಿಯ ಆಶ್ರಯದಲ್ಲಿ ಬದುಕುವಾಗ ಇಷ್ಟಾದರೂ ಮಾಡಿ ಗೌರಿಯ ಋಣ ಮುಟ್ಟಿಸಬೇಕು ಎಂದು ಗೌರಿಯ ಮಾತಿಗೆ ಒಪ್ಪಿಗೆ ಸೂಚಿಸಿದಾಗ ಗೌರಿಯು ನಿಜವಾಗಿ ತಾನು ತಾಯಿ ಆದೇ ಎಂಬಂತ ಖುಷಿ ಪಡುತ್ತಾಳೆ.

ಆಕೆಯ ಖುಷಿಗೆ ಪಾರವೆ ಇರಲಿಲ್ಲ. ಇದಕ್ಕೆ ಬಲವಾದ ಮುಖ್ಯ ಕಾರಣವು ಇತ್ತು. ಜನರ ಕೊಂಕು ಮಾತು, ಮನೆಯಲ್ಲಿರು ಮುದುಕೀಯ ನೆರ ಮಾತು ಆಕೆಯನ್ನು ಘಾಸಿಗೊಳಿಸುತ್ತಿದ್ದವು. “ನಾಳೆ ನಿನಗ ಬದಲಾಮೀ ರ್ತದಗ ಗೋರಿ... ಈ ಸೂರನ ತೇಲಿಮ್ಯಾಲ ಮೇಣಸ ಆರಿ ಬ್ಯಾಡ... ನಿನ್ ಬಸರಂತೂ ಬತ್ತಿ ಹೋಗ್ಯಾದ ಒಳಗಿನ ಹುವ್ವಾ ಎಲ್ಲಾ ಒಣಗಿ ಮುಟರಗೊಂಡು ಸತ್ತು ಬಿದ್ದಿರಬೇಕು. ನೀ ಅರೇ ಅಸಲಿ ಗೊಡ್ಡ ಆಗಿ ಸಾಬೀತಾಗಿದಿ. ಅವಂಗ ಮತ್ತೊಂದು ಹೆಣ್ತಿಗಿ ಮಾಡಿ ನಿನ್ನ ದೊಡ್ಡಸ್ತನಕಿ ಉಳಸಗೋ ಗೋರಿ... ಇಲ್ಲಂದ್ರ ಈ ವಂಶ ನಾಸಾಗ್ತದ. ಹಿಂದ ಸತ್ತ ಹಿರೇರೆಲ್ಲಾ ನಿನಗೆ ಮಾಫ ಮಾಡಂಗಿಲ್ಲ ನೋಡೆ ರ್ೇ... ಅಂದ್ರ ನಾ ಈ ಭೂಮಿ ತಾಯಿ ಆಣಿ ಮಾಡಿ ಹೇಳ್ತಿನಿ”[4] ಎನ್ನುತಾ ಮುದುಕಿ ತನ್ನ ಮೊಮ್ಮಗನಿಗೆ ಬೇರೆ ಮದುವೆ ಮಾಡಬೇಕು. ನೀ ಅದರ ಜವಾಬ್ದಾರಿ ಹೊರಬೇಕು ಎಂದು ಗೌರಿಗೆ ಆಗಾಗ ಒಟಗುಟುತ್ತಾ ಇದ್ದಳು. ಇಂತಹ ಮಾತಿನಿಂದ ಮುಕ್ತಿ ಹೊಂದ ಬೇಕೆಂದು ಚಿಕ್ಕಿಯ ಗರ್ಭ ದಾನಕ್ಕ ಬೇಡಿಕೆ ಇಟ್ಟು ಗೌರಿ ತನ್ನ ಗಂಡನ ಕೈ ಕಾಲು ಬಿದ್ದು ಒಪ್ಪಿಸಿದಳು. ಈ ಸ್ಥಿತಿಯು ಆಕೆಯಲ್ಲಿ ತಾಯ್ತನ ಹಂಬಲ ಎನೇಲ್ಲಾ ಮಾಡಲು ಹಚ್ಚುತೆ ಎಂಬುದಕ್ಕೆ ಗೌರಿಯ ನಡೆ ತೋರಿಸುತ್ತವೆ.

ಚಿಕ್ಕಿಯೊಂದಿಗೆ ತನ್ನ ಗಂಡ ನನ್ನ ಮಲಗಿಸಿದಾಗ ಅವಳು ಗರ್ಭದರಿಸಿದರೆ.

ತಾನೆ ಗರ್ಭದರಿಸಿರುವುದು ಎಂಬ ಸುದ್ದಿ ಉರೇಲ್ಲಾ ಹರಡುವಂತೆ ಮಾಡಲು ವ್ಯವಸ್ಥೆಯ ಮಾಡಿದಳು. ಗೌರಿ ತಾನು ಅಂದು ಕೊಂಡಂತೆ ಎಲ್ಲಾವು ನಡದೆ ಇತ್ತು. ಗೌರಿ ಗರ್ಭ ದರಿಸಿದ ಸುದ್ದಿ ತಿಳಿದು ಗಂಡ ಹೆಂಡತಿಯರಿಬ್ಬರೂ ಕುಣಿದು ಕುಪ್ಪಳಿಸಿದರು. ಮನೆಯಲ್ಲಿರುವ ಮುದುಕಿ ಇವರ ಖುಷಿಗೆ ಪಾರವೇ ಇರಲಿಲ್ಲ. ಚಿಕ್ಕಿ ಗರ್ಭ ದರಿಸಿರುವುದು ಗೌರಿ ಮತ್ತು ಗಂಡ ಈಸೂರನಿಗೆ ಬಿಟ್ಟರೆ ಯಾರಿಗೂ ತಿಳಿದಿರಲ್ಲ. ಸ್ವತಃ ಗೌರಿನೆ ಬಸುರಿ ಎಂಬ ಸುದ್ದಿ ಕ್ಷಣಾರ್ಧದಲ್ಲಿ ಊರೆಲ್ಲ ಸುದ್ದಿಯಾಯಿತೆ, ಇಡಿ ಊರೇ ಮಾತಾಡಿ ಕೊಳ್ಳುವಂತಾಯಿತ್ತು.

ಊರಿಗೆ ಶ್ರೀಮಂತರಾಗಿದ ಆ ದಂಪತಿಗಳು ಚಿಕ್ಕಿಯನ್ನು ಕರೆದುಕೊಂಡು ದೂರದ ಮುಂಬಾಯಿ ನಗರಕ್ಕೆ ಹೊರಡುವುದಾಗಿ ನಿರ್ಧರಿಸಿದರು. ಕಾರಣ ಗೌಡ್ತಿ ಬಹಳ ದಿನಗಳ ನಂತರ ಬಸುರಿ ಆಗಿದ್ದಾಳೆ. ಚೊಚ್ಚಲ ಬಾಣತನವೆಂದು ಹೇಳ ಹೊರಟರು. ತಾವು ದೊಡ್ಡಸ್ಪತ್ರೆಗೆ ಹೊರಡುವ ವರ್ತಮಾನ ಇಡಿ, ಊರಿಗೆ ಮುಟ್ಟಿಸಿದರು. ಚಿಕ್ಕಿಯನ್ನು ಕರೆದುಕೊಂಡು ಮುಂಬಾಯಿಗೆ ಬಂದಾಗ ಗೌರಿ ಅಂದುಕೊಂಡಂತೆ ಚಿಕ್ಕಿ ಗಂಡು ಮಗುವಿಗೆ ಜನ್ಮ ನೀಡಿದಳು. ಈ ವಿಷಯ ಗೌರಿ ಮತ್ತು ಗೌಡ ಈಸೂರಪ್ಪ ಇಬ್ಬರ ಖುಷಿಗೆ ಪಾರವೇ ಇಲ್ಲದಂತಾಗಿತ್ತು. ಚಿಕ್ಕಿ ಹಡದು ಮಗುವನ್ನೆ ಗೌರಿಯ ಉಡಗ ಹಾಕಿದಿಯಾಯಿತ್ತು. ಹಾಲು ಉಣಿಸಲು ಮಾತ್ರ ಚಿಕ್ಕಿಯ ಹತ್ತಿರ ಬಿಡುತ್ತಿದ್ದಳು. ಚಿಕ್ಕಿಯ ಮೈ ಆರಿದ ಕೆಲ ದಿನಗಳ ನಂತರ ಊರಿಗೆ ಹೋಗುವುದಾಗಿ ಹೇಳುತ್ತಿದ್ದರು. ಗೌರಿಯ ನಡೆಯ ಕಂಡು ಚಿಕ್ಕಿಯ ಎದೆಯಲ್ಲಿ ಎನೊ ಒಂಥರ ನಡಕು. ಒಳಗೊಳಗೆ ಆತಂಕ ಸುರುವಾಗಿತ್ತು.

ಗೌರಿಯು ಮಗುವಿನೊಂದಿಗೆ ಕಾಲ ಕಳೆಯುತ್ತಿದ್ದಳು. ತನ್ನ ಗಂಡನ ರಕ್ತ ಹರಿಯುತ್ತಿರುವ ವಂಶದ ಕುಡಿಯೊಂದನ್ನು ತನ್ನದೆ ಎಂದು ಭಾವಿಸಿ ಆ ಮಗುವನ್ನೆ ಎತ್ತಿ ಆಡಿಸಿ ಆಕೆಯ ತಾಯ್ತನ ಒಂದು ಕಡೆಯಾದರೆ ಮಗುವನ್ನು ಜನ್ಮ ನೀಡಿದ ಚಿಕ್ಕಿಯ ತಳಮಳ ಇನ್ನೊಂದು ಕಡೆ. ಈ ಉಭಯ ತಾಯಂದಿರ ಸಂಕಟ ತುಡಿತ ತುಂಬಾ ಸೂಕ್ಷವಾಗಿ ಕಥೆಗಾರರು ಇಲ್ಲಿ ಕಟ್ಟಿಕೊಟ್ಟಿದ್ದಾರೆ.

ಒಂಬತ್ತು ತಿಂಗಳು ಹೊತ್ತು ಹೆತ್ತಿರುವ ಚಿಕ್ಕಿಯ ತಾಯ್ತನದ ಸಂಕಟವನ್ನು ನಾವಿಲ್ಲಿ ನೋಡಬಹುದು. “ಗೌರವ್ವ ಈಸೂರರು ಪಕ್ಕದ ಕೋಣೆಯಲ್ಲಿ ಮಗುವಿನೊಂದಿಗೆ ನಗುವಾಗ ಕನಸು ಕಾಣುವಾಗ ಮುದ್ದಿಸಿ ಕೃತಾರ್ಥರಾಗುವಾಗಲೆಲ್ಲ ಚಿಕ್ಕಿಗೆ ಎದೆಯಲ್ಲಿ ಎನೋ ಕಳೆದುಕೊಂಡಂತಹ ಸಂಕಟ. ತನ್ನದೆಲ್ಲಾ ದರೋಡಯಾದಂತ ಖಾಲಿ ಖಾಲಿಯಾದಂತೆ ಹೊಟ್ಟೆ ಗರ್ಭಗಳಲ್ಲಿ ಮಾತಿಗೆ ಮೀರಿದ ಸಂಕಟ. ಆದರೂ ಚಿಕ್ಕಿ ಮಹಾಮೌನಿ. ಗೆಳತಿ ಗೌರವ್ವನಿಗಾಗಿ ತಾನು ಗರ್ಭದಾನ ಮಾಡಿದ್ದು ಮಗುವನ್ನು ಹೆತ್ತು ಕೊಟ್ಟಿದು ತನಗೆ ಇಷ್ಟ ಭಾರಿ ಬಿಳುತ್ತವೆ ಎಂಬುದು

ಈಗ ಅರಿವಾಗಿದೆ."[5] ಹುಚ್ಚಿಯಾದವಳು ಕೂಡ ತನ್ನ ಹೆತ್ತಕರುಳನ್ನ ಪ್ರೀತಿಸುತ್ತಾಳೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಆದರೆ ಚಿಕ್ಕಿಯಲ್ಲಿನ ತಾಯ್ತನ ಹೆಚ್ಚಾಗುತ್ತಿತ್ತು. ತನ್ನ ಮಗು ತನಗೆ ಬೇಕು ಎಂಬ ಬಯಕೆ ಹುಟ್ಟತೊಡಗಿತ್ತು.

ಮಗು ಮತ್ತು ಚಿಕ್ಕಿಯನ್ನ ಮುಂಬೈಯಿಂದ ಮರಳಿ ಊರಿಗೆ ಬರುವಾಗ ಗೌಡ್ತಿ ಮತ್ತು ಗೌಡ ಬಯಲು ಕಡೆ ಹೋದಾಗ ಚಿಕ್ಕಿ ಬಂಡ ಧೈರ್ಯ ಮಾಡಿ ಆ ಜನ ದಟ್ಟಣೆಯ ಮಹಾ ನಗರದ ಪರಿವಿಲ್ಲದ ಚಿಕ್ಕಿ ರೈಲು ನಿಲ್ದಾಣದಿಂದ ಎಲ್ಲಿಗೂ ಹೊರಡುವ ರೈಲಿನಲ್ಲಿ ಕುಳಿತು ಮಗುವಿನೊಂದಿಗೆ ಹೊರಟೆ ಬಿಟ್ಟಳು.

ತಾಯ್ತನ ಎಂಬುದು ಪ್ರಕೃತಿ ದತ್ತವಾದ ಕೊಡುಗೆ ಆ ಪ್ರೀತಿಯು ಅರಿಯುವುದು ಕಷ್ಟವೆ ಹೌದು. ಯಾವ ತಾಯಿಯು ತನ್ನ ಮಗುವನ್ನ ಇನ್ನೊಬ್ಬರಗೆ ಒಪ್ಪಿಸುವುದಿಲ್ಲ. ಹಾಗೆ ಹೆತ್ತ ಕಂದಮ್ಮ ನನ್ನು ಕಳೆದುಕೊಳ್ಳಲು ಇಚ್ಚಿಸುವುದಿಲ್ಲ. ಮಕ್ಕಳಿಗಾಗಿ ತಮ್ಮ ಜೀವವನ್ನೆ ಸವೆಸಿದ ತಾಯಂದಿರ ಅನೇಕ ಉದಾಹರಣೆಗಳು ಸೀಗುತ್ತವೆ.

ಅವ್ವ ಮತ್ತು ಗರ್ಭ ಈ ಎರಡು ಕಥೆಗಳಲ್ಲಿ ಅಡಗಿದ ಆದಮ್ಯವಾದ ತಾಯ್ತನವು ಯಾರಿಂದಲೂ ಕಟ್ಟಿ ಹಾಕುವಂತಹದಲ್ಲ ಎಂಬುದು ಇಲ್ಲಿ ತೋರಿಸಿಕೊಟ್ಟಿದ್ದಾರೆ. ತಾಯಿಯ ಪ್ರೀತಿಗೆ ಕೊನೆ ಎಲ್ಲಿದೆ ಎಂಬ ಅಂಶವು ನಾವಿಲ್ಲಿ ಮರೆಯುವಂತಿಲ್ಲ. ಇಂತಹ ಹೆಣ್ಣಿನ ಸಂಕಟಹೊತ್ತ ಅನೇಕ ಕಥೆಗಳು ಗೀತಾ ನಾಗಭೂಷಣ ಅವರ ಕಥೆಯಲ್ಲಿ ಕಾಣಸಿಗುತ್ತವೆ.

**ಅಡಿ ಟಿಪ್ಪಣಿಗಳು:**

1. ಗೀತಾ ನಾಗಭೂಷಣ. (2012). ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವ. ಶ್ರೀಸಿದ್ದಲಿಂಗೇಶ್ವರ ಪ್ರಕಾಶನ. ಕಲಬುರುಗಿ. ಪು.ಸಂ. 568
2. ಗೀತಾ ನಾಗಭೂಷಣ. (2012). ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವ. ಶ್ರೀಸಿದ್ದಲಿಂಗೇಶ್ವರ ಪ್ರಕಾಶನ. ಕಲಬುರುಗಿ. ಪು.ಸಂ. 568
3. ಗೀತಾ ನಾಗಭೂಷಣ. (2012). ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವ. ಶ್ರೀಸಿದ್ದಲಿಂಗೇಶ್ವರ ಪ್ರಕಾಶನ. ಕಲಬುರುಗಿ. ಪು.ಸಂ. 569
4. ಗೀತಾ ನಾಗಭೂಷಣ. (2012). ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವ. ಶ್ರೀಸಿದ್ದಲಿಂಗೇಶ್ವರ ಪ್ರಕಾಶನ. ಕಲಬುರುಗಿ. ಪು.ಸಂ. 623
5. ಗೀತಾ ನಾಗಭೂಷಣ. (2012). ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವ. ಶ್ರೀಸಿದ್ದಲಿಂಗೇಶ್ವರ ಪ್ರಕಾಶನ. ಕಲಬುರುಗಿ. ಪು.ಸಂ. 623

**ಪರಾಮರ್ಶನ ಗ್ರಂಥಗಳು:**

1. ಶೇಷಗಿರಿರಾವ್ ಎಲ್. ಎಸ್. (2011). ಹೊಸಗನ್ನಡ ಸಾಹಿತ್ಯ ಚರಿತ್ರೆ. ಅಂಕಿತ ಪುಸ್ತಕ. ಬೆಂಗಳೂರು.
2. ಮುಗುಳಿ ರಂ. ಶ್ರೀ. (2010). ಕನ್ನಡ ಸಾಹಿತ್ಯ ಚರಿತ್ರೆ. ಗೀತಾ ಬುಕ್ ಹೌಸ್. ಮೈಸೂರು.
3. ಗೀತಾ ನಾಗಭೂಷಣ. (2012). ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವ. ಶ್ರೀಸಿದ್ದಲಿಂಗೇಶ್ವರ ಪ್ರಕಾಶನ. ಕಲಬುರುಗಿ.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4.0 International License.